1632(2169) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಕೆಳಕಂಡ ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸಣ್ಣ ನೀರಾವರಿ ಇಲಾಖೆಯ ಜಲಸಂವರ್ಧನ ಯೋಜನೆ ಕಾರ್ಯಕ್ರಮಕ್ಕಾಗಿ 2002ನೇ ಸಾಲಿನಿಂದ ಇಲ್ಲಿಯವರೆಗೆ ವಿಶ್ವಬ್ಯಾಂಕಿನಿಂದ ಪಡೆದ ನೆರವಿನ ಮೊತ್ತವೆಷ್ಟು;

ಆ. ಈ ಯೋಜನೆಯಡಿಯಲ್ಲಿ ರಾಜ್ಯದ ಎಷ್ಟು ಕೆರೆಗಳ ಸಮಗ್ರ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ;

ಇ. ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಈ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ರೂ.55.77 ಕೋಟಿ

ಆ. 2005 ಕೆರೆಗಳ ಸಮಗ್ರ ಅಭಿವೃದ್ಧಿಗೆ ಉದ್ದೇಶಿಸಿದ್ದು, ಈ ಪೈಕಿ 1379 ಕೆರೆಗಳ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ.

ಇ. ಸದರಿ ಜಿಲ್ಲೆಗಳು ಈ ಯೋಜನಾ ವ್ಯಾಪ್ತಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ.

1633(2180) ಶ್ರೀ ರಾಜೇಂದ್ರವರ್ಮ (ಹುಲಸೂರು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಜಲಸಂವರ್ಧನ ಯೋಜನೆಯನ್ನು ಎಂದು ಪ್ರಾರಂಭಿಸಲಾಯಿತು;

ಆ. ಈ ಯೋಜನೆಯ ಉದ್ದೇಶಗಳೇನು;

ಇ. ಇದಕ್ಕಾಗಿ ಬಜೆಟ್‌ನಲ್ಲಿ ಮೀಸಲಾಗಿಟ್ಟಿರುವ ಹಣವೆಷ್ಟು;

ಈ. ಇಲ್ಲಿಯವರೆಗೆ ಖರ್ಚು ಮಾಡಲಾಗಿರುವ ಹಣವೆಷ್ಟು; (ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು);

ಉ. ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಹುಲಸೂರು ಮತಕ್ಷೇತ್ರದಲ್ಲಿ ಎಷ್ಟು ಕೆರೆಗಳ ಹೂಳನ್ನು ಇಲ್ಲಿಯವರೆಗೆ ಎತ್ತಿ ದುರಸ್ತಿ ಮಾಡಲಾಗಿದೆ (ಪೂರ್ಣ ವಿವರ ಒದಗಿಸುವುದು);

ಊ. ಈ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳ ಹೂಳೆತ್ತಲಾಗುವುದು ಹಾಗೂ ಇದಕ್ಕಾಗಿ ಖರ್ಚು ಮಾಡಲಿರುವ ಹಣವೆಷ್ಟು (ಗ್ರಾಮವಾರು ಅಂಕಿಅಂಶಗಳನ್ನು ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ದಿನಾಂಕ 08.07.2002 ರಂದು ಪ್ರಾರಂಭಿಸಲಾಯಿತು.

ಆ. ಸಮುದಾಯ ಆಧಾರಿತ ಸುಸ್ಥಿರ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಕೆರೆಗಳ ಪುನಶ್ಚೇತನ ಹಾಗೂ ನಿರ್ವಹಣಾ ಕಾರ್ಯವನ್ನು ಕೈಗೆತ್ತಿಕೊಂಡು ಗ್ರಾಮೀಣ ಜನರ ಬದುಕನ್ನು ಸುಧಾರಿಸುವ ಮೂಲಕ ಬಡತನವನ್ನು ಕಡಿಮೆಗೊಳಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಇ. ಈ ಯೋಜನೆಯು 2002ನೇ ಸಾಲಿನಿಂದ ಪ್ರಾರಂಭಗೊಂಡು 2008ನೇ ಇಸವಿಯಲ್ಲಿ ಅಗತ್ಯಗೊಳ್ಳಲಿದ್ದು, ಇಲ್ಲಿಯವರೆಗೆ ಬಜೆಟ್‌ನಲ್ಲಿ ಮೀಸಲಿಟ್ಟ ವರ್ಷವಾರು ವಿವರ ಈ ಕೆಳಕಂಡಂತಿದೆ.

ವರ್ಷ	ಬಜೆಟ್‌ನಲ್ಲಿ ಬಿಡುಗಡೆ ಮಾಡಿದ ಹಣ (ಕೋಟಿಗಳಲ್ಲಿ)
2002–03	29.64
2003–04	31.44
2004–05	96.53

ಈ. ಯೋಜನೆಯ ಪ್ರಾರಂಭಿಕ ಹಂತದಿಂದ ಇಲ್ಲಿಯವರೆಗೆ ಅಂದರೆ ಫೆಬ್ರುವರಿ 2005ರವರೆಗೆ ಒಟ್ಟು ರೂ.75.21 ಕೋಟಿಗಳನ್ನು ಖರ್ಚು ಮಾಡಲಾಗಿದೆ. (ಜಿಲ್ಲಾವಾರು ಅಂಕಿಅಂಶಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಉ. ಬೀದರ್ ಜಿಲ್ಲೆಯಲ್ಲಿ ಐದು ಕೆರೆಗಳ ಹೂಳನ್ನು ತೆಗೆದು ದುರಸ್ತಿ ಮಾಡಲಾಗಿದ್ದು, ಇವುಗಳ ಪೈಕಿ ಹುಲಸೂರು ಮತಕ್ಷೇತ್ರದಲ್ಲಿ ಶಿಡೋಳ್ ಕೆರೆಯ ಹೂಳನ್ನು ಎತ್ತಿ ದುರಸ್ತಿ ಮಾಡಲಾಗಿದೆ. ಬೀದರ್ ಜಿಲ್ಲೆಯಲ್ಲಿ ಈ ಸಾಲಿಗೆ 14 ಕೆರೆಗಳನ್ನು ಆಯ್ಕೆ ಮಾಡಿದ್ದು, ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಮೂರು ಅಂದರೆ ಚಿನ್‌ಕೇರಾ ಜಲಸಂಗಿ ಮತ್ತು ಹುಣಸೆಗೇರಾ ಈ ಕೆರೆಗಳ ದುರಸ್ತಿ ಕಾರ್ಯದ ಬಗ್ಗೆ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ (ITDP) ಗಳನ್ನು ತಯಾರಿಸಲಾಗುತ್ತಿದೆ. ಈ ಎಲ್ಲಾ 14 ಕೆರೆಗಳಿಗೆ ಸುಮಾರು ರೂ.200ಕೋಟಿ ಖರ್ಚಾಗುವ ನಿರೀಕ್ಷೆ ಇದೆ. ಗ್ರಾಮವಾರು ಅಂಕಿಅಂಶಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ–1

Payments	Bagalkot	Bidar	Bellary	Chitradurga	Chintamani	Haveri	Kolar	Koppal	Raichur	Tumkur	Total
Tank Restoration	270.49	153.01	66.98	169.75	889.29	236.59	805.62	21.58	325.03	1044.14	3982.48
Total	**270.49**	**153.01**	**66.98**	**169.75**	**889.29**	**236.59**	**805.62**	**21.58**	**325.03**	**1044.14**	**3982.48**

ಅನುಬಂಧ–2

ಕ್ರ.ಸಂ	ಕೆರೆಗಳ ಹೆಸರು	ಐಟಿಡಿಪಿಯ ಒಟ್ಟು ವೆಚ್ಚ	ಷರಾ
1	ಶಡೋಳ	13,75,332.00	ಕಾಮಗಾರಿ ಮುಗಿದಿದೆ
2	ಸೋಲಾಪುರ	13,15,797.00	ಕಾಮಗಾರಿ ಮುಗಿದಿದೆ
3	ಕಟ್ಟೆಳ್ಳಿ	9,16,732.00	ಕಾಮಗಾರಿ ಮುಗಿದಿದೆ
4	ಸಿಂಧನಾಕೇರಾ	14,57,505.00	ಕಾಮಗಾರಿ ಶೇ.90ರಷ್ಟು ಮುಗಿದಿದೆ.
5	ಮಲ್ಲಾಪುರ	12,10,315.00	ಕಾಮಗಾರಿ ಶೇ.90ರಷ್ಟು ಮುಗಿದಿದೆ.
6	ಅಣದೂರೆ	7,95,000.00	ಕಾಮಗಾರಿ ಪ್ರಗತಿಯಲ್ಲಿದೆ
7	ಮಂಗಲಗಿ	10,70,000.00	ಕಾಮಗಾರಿ ಪ್ರಗತಿಯಲ್ಲಿದೆ
8	ಬೆಳಕೇರಾ	11,05,000.00	ಕಾಮಗಾರಿ ಪ್ರಗತಿಯಲ್ಲಿದೆ
9	ಚಟ್ನಳ್ಳಿ	15.20,490.00	ಕಾಮಗಾರಿ ಪ್ರಾರಂಭವಾಗಿದೆ
10	ಔರಾದ್ (ಎಸ್)	21,97,760.00	ಕಾಮಗಾರಿ ಪ್ರಾರಂಭವಾಗಿದೆ
11	ಸಿಕಂದರಾಪುರ್	21,39,950.00	ಕಾಮಗಾರಿ ಪ್ರಾರಂಭವಾಗಿದೆ
12	ಜಿನ್‌ಕೇರಾ	15–20 ಲಕ್ಷಗಳು (ಅಂದಾಜು)	ITDPಗಳನ್ನು ತಯಾರಿಸಲಾಗುತ್ತಿದೆ
13	ಜಲಸಂಗಿ	15–20 ಲಕ್ಷಗಳು (ಅಂದಾಜು)	ITDP ಗಳನ್ನು ತಯಾರಿಸಲಾಗುತ್ತಿದೆ
14	ಹುಣಸೆಗೇರಾ	15–20 ಲಕ್ಷಗಳು (ಅಂದಾಜು)	ITDP ಗಳನ್ನು ತಯಾರಿಸಲಾಗುತ್ತಿದೆ